# ನರಸಿಂಹ ಮಂತ್ರವೊಂದಿರಲು ಸಾಕು

( Version 2 )

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi (listed as Version 2), page no. 310.
2. **Ref.:** Shri Purandara Dasara Sahitya Part – 3, Mahatmya Gnyana, edited by Shri Betageri Krishna Sharma and Shri Bengeri Huchhu Rayaru. (listed as Version 1), page no. 12.
3. **Note:** The lyrics considered here are as per Ref. 1 above. The singer has followed these wordings. These lyrics are listed separately as Version 2.
4. **Note:** There is one more song similar to this. That is "narasimha mantra onde sAku" – "ನರಸಿಂಹ ಮಂತ್ರ ಒಂದೆ ಸಾಕು". This is listed as a separate song as Version 1, because, many singers have sung it like this. Also, these lyrics are available in the standard book (Ref. 2 above).
5. **Note:** Ankitas are same in both the versions (version 1 and version 2).

ರಾಗ: ಕಾಂಭೋಜಿ ತಾಳ: ಝಂಪೆ

ನರಸಿಂಹ ಮಂತ್ರವೊಂದಿರಲು ಸಾಕು
ದುರಿತ ಕೋಟಿಯ ತರಿದು ಭಾಗ್ಯವನು ಕೊಡುವ || ಪ ||

ಶಿಶುವಾದ ಪ್ರಲ್ಹಾದನ ಬಾಧೆ ಬಿಡಿಸಿದ ಮಂತ್ರ
ಅಸುರ ಕುಲದವರಿಗೆ ಶತ್ರು ಮಂತ್ರ
ವಸುಧೆಯೊಳು ಪಾತಕಿಗಳ ಅಘವ ಹೀರುವ ಮಂತ್ರ
ಪಶುಪತಿಗೆ ಪ್ರಿಯವಾದ ದಿವ್ಯ ಮಂತ್ರ || 1 ||

ದಿಟ್ಟ ಧ್ರುವರಾಯನಿಗೆ ಪಟ್ಟಗಟ್ಟಿದ ಮಂತ್ರ
ಶಿಷ್ಟ ವಿಭೀಷಣನ ಪೊರೆದ ಮಂತ್ರ
ಕಟ್ಟ ಕಡೆಯಲಿ ಅಜಾಮಿಳನ ಸಲಹಿದ ಮಂತ್ರ
ಮುಟ್ಟಿ ಭಜಿಸಿದವರಿಗೆ ಮೋಕ್ಷ ಮಂತ್ರ || 2 ||

ಹಿಂಡು ಭೂತವ ಕಡಿದು ತುಂಡು ಮಾಡುವ ಮಂತ್ರ
ಕೊಂಡಾಡೋ ಲೋಕಕೆ ಪ್ರಪಂಚ ಮಂತ್ರ
ಗಂಡುಗಲಿ ಕದನ ಉದ್ದಂಡ ವಿಕ್ರಮ ಮಂತ್ರ
ಪುಂಡರೀಕಾಕ್ಷ ಪುರಂದರ ವಿಠಲ ಮಂತ್ರ || 3 ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

ಶ್ರೀ ಹರಿಯ ಅನಂತ ನಾಮಗಳಲ್ಲಿ ನರಸಿಂಹ ನಾಮದ ಮಹಿಮೆಯನ್ನು ಈ ಹಾಡಿನಲ್ಲಿ ಹೇಳಲಾಗಿದೆ. ನರಸಿಂಹ ಮಂತ್ರವು ಭೂತೋಚ್ಚಾಟನೆ ಮಾಡುವುದೆಂಬ ಪರಂಪರೆ ನಮ್ಮಲ್ಲಿದೆ.

**ತಲೆಗಾಯು** = ಸಂರಕ್ಷಿಸು

**ಅಸುರ** = ಹಿರಣ್ಯ ಕಷಿಪು

**ಪಶುಪತಿ** = ಶಿವ

**ಮೂಲ ಮಂತ್ರ** = ಓಂ ನಮೋ ವಾಸುದೇವಾಯ

**Classification:** Keerthane
**Ankita:** purandara vittala
**Location:** NA
**Category:** Narasimha Stuti, Mahatmya Gynana
**Group Words:** Narasimha, pati, mantra, prahallada, Bhagya, asura, divya, bhumi, shiva, Dhruva, vibhshana, ajamila, mukti, bhajane, loka,
**Pravachana:** NA
**Explanation:** NA